# ಅನಾಥ ಆಶ್ರಮಗಳನ್ನು ಕುರಿತು ಒಂದು ಸಮಾಜಶಾಸ್ತ್ರೀಯ ಅಧ್ಯಯನ: ಬೆಂಗಳೂರು ನಗರ ಜಿಲ್ಲೆಯನ್ನು ಅನುಲಕ್ಷಿಸಿ

**ಅಮರೇಶ್ ಎಸ್.**

ಸಂಶೋಧನಾ ವಿದ್ಯಾರ್ಥಿ, ಸಮಾಜಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**DOI: https://doi.org/10.5281/zenodo.18470557**

## ABSTRACT:

ಪ್ರಸ್ತುತ ಅಧ್ಯಯನವು ಬೆಂಗಳೂರು ನಗರದಲ್ಲಿನ ಅನಾಥಾಶ್ರಮಗಳ ಸ್ಥಿತಿ, ಅವರ ನಿರ್ವಹಣಾ ಕ್ರಮ, ಮಕ್ಕಳು ಎದುರಿಸುತ್ತಿರುವ ಸಾಮಾಜಿಕ–ಆರ್ಥಿಕ ಹಾಗೂ ಮಾನಸಿಕ ಸಮಸ್ಯೆಗಳನ್ನು ಗುರುತಿಸುವ ಉದ್ದೇಶದಿಂದ ನಡೆಸಲಾಗಿದೆ. ಆಧುನಿಕ ನಗರೀಕರಣ ಮತ್ತು ಸಾಮಾಜಿಕ ವಿಭಜನೆಯ ನಡುವಿನ ಅನಾಥಾಶ್ರಮಗಳ ಪಾತ್ರ ಮಹತ್ತರವಾಗಿದೆ. ಅಧ್ಯಯನವು ಅನಾಥ ಮಕ್ಕಳ ಜೀವನದ ಗುಣಮಟ್ಟವನ್ನು ತಿಳಿಯಲು ಹಾಗೂ ಅನಾಥಾಶ್ರಮಗಳಲ್ಲಿ ಇರುವ ಶೈಕ್ಷಣಿಕ, ಆರೋಗ್ಯ, ಮನೋವೈಜ್ಞಾನಿಕ ಹಾಗೂ ಸಾಮಾಜಿಕ ಬೆಂಬಲದ ಅಂಶಗಳನ್ನು ವಿಶ್ಲೇಷಿಸುತ್ತದೆ. ಸಂಶೋಧನೆಯಿಂದ ಕಂಡುಬಂದಂತೆ, ಅನೇಕ ಆಶ್ರಮಗಳು ಮೂಲಭೂತ ಸೌಲಭ್ಯಗಳ ಕೊರತೆ, ತರಬೇತಿ ಪಡೆದ ಸಿಬ್ಬಂದಿಗಳ ಕೊರತೆ, ಆರ್ಥಿಕ ಸಂಪನ್ಮೂಲಗಳ ಅಭಾವ, ಮತ್ತು ಮಕ್ಕಳಿಗೆ ಉಂಟಾಗುವ ಮಾನಸಿಕ ಒತ್ತಡಗಳಿಂದ ಬಳಲುತ್ತಿವೆ. ಈ ಲೇಖನವು ಅನಾಥಾಶ್ರಮಗಳ ಸುಧಾರಣೆಗೆ ಶಿಫಾರಸುಗಳನ್ನೂ ಒಳಗೊಂಡಿದೆ.

## KEYWORDS:

ಅನಾಥ ಆಶ್ರಮಗಳು, ಬೆಂಗಳೂರು ನಗರ, ಮಾನಸಿಕ ಸಮಸ್ಯೆ, ಆರೋಗ್ಯದ ಸುಧಾರಣೆ, ಸಿಬ್ಬಂದಿಗಳ ಕೊರತೆ, ಆರ್ಥಿಕ ಸಂಪನ್ಮೂಲಗಳ ಅಭಾವ.

## ಪೀಠಿಕೆ

ಅನಾಥಾಶ್ರಮಗಳು ಸಮಾಜದ ಅತ್ಯಂತ ಬಡತನದ ಮಕ್ಕಳಿಗೆ ಆಶ್ರಯ, ಆಹಾರ, ಶಿಕ್ಷಣ ಹಾಗೂ ಆರೈಕೆ ನೀಡುವ ಪ್ರಮುಖ ಸಾಮಾಜಿಕ ಸಂಸ್ಥೆಗಳಾಗಿವೆ. ಇವು ಸಮಾಜದ ಮಾನವೀಯತೆಯ ಪ್ರತೀಕವಾಗಿದ್ದು, ರಾಜ್ಯ, ದಾನಶೀಲ ಸಂಸ್ಥೆಗಳು ಮತ್ತು ನಾಗರಿಕ ಸಮಾಜವು ಒಟ್ಟಾಗಿ ನಿರ್ವಹಿಸುವ ಪ್ರಮುಖ ಕ್ಷೇತ್ರವಾಗಿದೆ. ಬೆಂಗಳೂರು ನಗರದಲ್ಲಿ ಸಾಮಾಜಿಕ ಸೇವಾ ಸಂಸ್ಥೆಗಳ ಸಂಖ್ಯೆಯಲ್ಲಿ ವೃದ್ಧಿ ಕಂಡರೂ, ಅನಾಥಾಶ್ರಮಗಳ ಗುಣಮಟ್ಟ, ಮಕ್ಕಳ ಮಾನಸಿಕ ಸ್ಥಿತಿ ಹಾಗೂ ಸಾಮಾಜಿಕ ಮೌಲ್ಯಗಳ ಕುರಿತ ಅಧ್ಯಯನಗಳು ಸೀಮಿತವಾಗಿವೆ. ಈ ಹಿನ್ನೆಲೆಯಲ್ಲಿ, ಈ ಸಂಶೋಧನೆ "ಅನಾಥಾಶ್ರಮಗಳನ್ನು ಕುರಿತು ಒಂದು ಸಮಾಜಶಾಸ್ತ್ರೀಯ ಅಧ್ಯಯನ: ಬೆಂಗಳೂರು ನಗರ" ಎಂಬ ಶೀರ್ಷಿಕೆಯ ಅಡಿಯಲ್ಲಿ ರೂಪುಗೊಂಡಿದೆ.

## ಅಧ್ಯಯನದ ಉದ್ದೇಶಗಳು

1. ಬೆಂಗಳೂರು ನಗರದಲ್ಲಿನ ಅನಾಥಾಶ್ರಮಗಳ ಸ್ಥಿತಿ ಮತ್ತು ಅವರ ಕಾರ್ಯಪದ್ಧತಿಯನ್ನು ವಿಶ್ಲೇಷಿಸುವುದು.
2. ಅನಾಥಾಶ್ರಮಗಳಲ್ಲಿ ವಾಸಿಸುವ ಮಕ್ಕಳ ಸಾಮಾಜಿಕ, ಶೈಕ್ಷಣಿಕ ಹಾಗೂ ಮಾನಸಿಕ ಸ್ಥಿತಿಯನ್ನು ಅಧ್ಯಯನ ಮಾಡುವುದು.
3. ಅನಾಥಾಶ್ರಮಗಳ ನಿರ್ವಹಣೆಯಲ್ಲಿ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳ ಪಾತ್ರವನ್ನು ವಿಶ್ಲೇಷಿಸುವುದು.
4. ಮಕ್ಕಳ ಪುನರ್ವಸತಿ ಮತ್ತು ಸಮಾಜೀಕರಣ ಪ್ರಕ್ರಿಯೆಗಳಲ್ಲಿ ಎದುರಿಸುತ್ತಿರುವ ಅಡಚಣೆಗಳನ್ನು ಗುರುತಿಸುವುದು.
5. ಅನಾಥಾಶ್ರಮಗಳ ಸುಧಾರಣೆಗೆ ಅಗತ್ಯವಾದ ನೀತಿ ಹಾಗೂ ಕ್ರಮಗಳನ್ನು ಶಿಫಾರಸು ಮಾಡುವುದು.

## ಪ್ರಾಕಲ್ಪನೆ

1. ಅನೇಕ ಅನಾಥಾಶ್ರಮಗಳಲ್ಲಿ ಮಕ್ಕಳ ಮೂಲಭೂತ ಅಗತ್ಯಗಳು ಸಮರ್ಪಕವಾಗಿ ಪೂರೈಸಲ್ಪಡುವುದಿಲ್ಲ.
2. ಅನಾಥಾಶ್ರಮಗಳಲ್ಲಿ ವಾಸಿಸುವ ಮಕ್ಕಳು ಸಾಮಾನ್ಯ ಮಕ್ಕಳಿಗಿಂತ ಸಾಮಾಜಿಕ ಮತ್ತು ಮಾನಸಿಕವಾಗಿ ಹೆಚ್ಚು ಒತ್ತಡಕ್ಕೆ ಒಳಗಾಗುತ್ತಾರೆ.
3. ಸರ್ಕಾರದ ನೆರವು ಹಾಗೂ ಖಾಸಗಿ ದಾನಶೀಲ ಸಂಸ್ಥೆಗಳ ಪಾಲ್ಗೊಳ್ಳುವಿಕೆಯಲ್ಲಿ ಅಸಮಾನತೆ ಇದೆ.
4. ಉತ್ತಮ ಶಿಕ್ಷಣ ಮತ್ತು ಮನೋವೈಜ್ಞಾನಿಕ ಬೆಂಬಲ ದೊರೆತಲ್ಲಿ ಅನಾಥ ಮಕ್ಕಳು ಸಮಾಜದಲ್ಲಿ ಸಮಾನ ಸ್ಥಾನ ಪಡೆಯಲು ಸಾಧ್ಯ.

## ಅಧ್ಯಯನ ವಿಧಾನ

ಪ್ರಸ್ತುತ ಅಧ್ಯಯನವು ಮಾಧ್ಯಮಿಕ ಮಾಹಿತಿಯನ್ನು ಒಳಗೊಂಡಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅನಾಥಾಶ್ರಮಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

## ಅನಾಥಾಶ್ರಮಗಳು

ಅನಾಥಾಶ್ರಮಗಳು ಪೋಷಕರನ್ನು ಕಳೆದುಕೊಂಡ ಹಾಗೂ ನಾನಾ ಕಾರಣಗಳಿಂದ ಪೋಷಣೆ ಮಾಡಲು ಸಾಧ್ಯವಾಗದ ಮಕ್ಕಳಿಗೆ ಆಶ್ರಯ, ರಕ್ಷಣೆ, ಶಿಕ್ಷಣ ಮತ್ತು ಪಾಲನೆ ಮಾಡುವ ಸಂಸ್ಥೆಗಳು ಎನ್ನಬಹುದು. ಪ್ರಸ್ತುತ ದಿನಮಾನಗಳಲ್ಲಿ ಅನಾಥಾಶ್ರಮಗಳನ್ನು ಹಲವು ದೃಷ್ಟಿಕೋನಗಳಲ್ಲಿ ನೋಡಲಾಗುತ್ತಿದೆ. ಕೆಲವರು ಕಳಂಕ, ಮತ್ತೆ ಕೆಲವರು ನಿರ್ಗತಿಕ ಮತ್ತು ಅನಾಥ ಮಕ್ಕಳಿಗೆ ಆಧಾರಸ್ತಂಭ ಎಂಬುದಾಗಿ ಪರಿಗಣಿಸುತ್ತಾರೆ. ಈ ಸಮಾಜದಲ್ಲಿ ಬದುಕಲು ಆಶ್ರಯವಿಲ್ಲದ ಮಕ್ಕಳಿಗೆ ಇವು ಆಶ್ರಯ ನೀಡುವ ತಾಣಗಳಾಗಿವೆ. ಅವರುಗಳಿಗೆ ಸುರಕ್ಷಿತ ವಾತಾವರಣ ಒದಗಿಸಿ ಅವರ ಬೆಳವಣಿಗೆಗೆ ಸಹಾಯ ಮಾಡುತ್ತವೆ. ಭಾರತದ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಗಮನಿಸಿದಾಗ ನಗರ ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ಆಶ್ರಮಗಳು ಇಂದು ಕಾರ್ಯನಿರ್ವಹಿಸುತ್ತಿವೆ. ಅದರಲ್ಲೂ ಬೆಂಗಳೂರು ನಗರ ಜಿಲ್ಲೆಯಲ್ಲಿ ನೂರಾರು ಆಶ್ರಮಗಳು ಕಾರ್ಯಪ್ರವೃತ್ತವಾಗಿವೆ. ಅವರುಗಳ ಉದ್ದೇಶಗಳು ಮತ್ತು ಕಾರ್ಯಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

## ಅನಾಥಾಶ್ರಮಗಳ ಉದ್ದೇಶ ಮತ್ತು ಕಾರ್ಯಗಳು

1. ಆಶ್ರಯ ಮತ್ತು ರಕ್ಷಣೆ: ಅನಾಥ ಮಕ್ಕಳಿಗೆ ಸುರಕ್ಷಿತ ತಾಣ ನೀಡುವುದು.
2. ಪಾಲನೆ ಮತ್ತು ಪೋಷಣೆ: ಮಕ್ಕಳಿಗೆ ಆಹಾರ, ಉಡುಪು ಮತ್ತು ವೈದ್ಯಕೀಯ ಸೌಲಭ್ಯ ಒದಗಿಸುವುದು.
3. ಶಿಕ್ಷಣ: ಶಾಲಾ ಶಿಕ್ಷಣ ಮತ್ತು ಕೌಶಲ್ಯ ತರಬೇತಿ ನೀಡಿ ಸ್ವಾವಲಂಬಿಗಳಾಗಿಸುವುದು.
4. ಸಾಂಸ್ಕೃತಿಕ ಮತ್ತು ನೈತಿಕ ಮೌಲ್ಯಗಳ ಕಲಿಕೆ: ಮೌಲ್ಯಗಳನ್ನು ಕಲಿಸಿ ಉತ್ತಮ ನಾಗರಿಕರನ್ನಾಗಿ ರೂಪಿಸುವುದು.

## ಸಮಸ್ಯೆಗಳು

1. ಆರ್ಥಿಕ ಸಂಪನ್ಮೂಲಗಳ ಕೊರತೆ: ಅನೇಕ ಅನಾಥಾಶ್ರಮಗಳು ಸರ್ಕಾರದ ಅಥವಾ ದಾನಿಗಳ ನೆರವಿನ ಕೊರತೆಯಿಂದ ನಿತ್ಯೋಪಯೋಗಿ ವಸ್ತುಗಳ ಕೊರತೆಯನ್ನು ಎದುರಿಸುತ್ತಿವೆ.
2. ಶಿಕ್ಷಣದ ಅಸಮರ್ಪಕತೆ: ಕೆಲವು ಆಶ್ರಮಗಳಲ್ಲಿ ಶಿಕ್ಷಣದ ಗುಣಮಟ್ಟ ಕಡಿಮೆ; ಶಿಕ್ಷಕರ ಕೊರತೆ ಮತ್ತು ಪಠ್ಯಕ್ರಮದ ಅಭಾವ ಕಂಡುಬಂದಿದೆ.

3. ಮನೋವೈಜ್ಞಾನಿಕ ಬೆಂಬಲದ ಕೊರತೆ: ಅನೇಕ ಮಕ್ಕಳಲ್ಲಿ ಆತ್ಮವಿಶ್ವಾಸದ ಕೊರತೆ, ಭಯ, ಸಾಮಾಜಿಕ ಹಿಂಜರಿಕೆ ಮತ್ತು ಗುರುತಿನ ಸಂಕಟ ಕಂಡುಬಂದಿದೆ.
4. ಆರೋಗ್ಯ ಸಮಸ್ಯೆಗಳು: ನಿಯಮಿತ ಆರೋಗ್ಯ ತಪಾಸಣೆ ಮತ್ತು ಪೌಷ್ಟಿಕ ಆಹಾರದ ಕೊರತೆಯಿಂದ ಶಾರೀರಿಕ ಸಮಸ್ಯೆಗಳು ಕಂಡುಬಂದಿವೆ.
5. ಸಿಬ್ಬಂದಿ ತರಬೇತಿಯ ಕೊರತೆ: ಆಶ್ರಮಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಮಕ್ಕಳ ಮನೋವಿಜ್ಞಾನ ಮತ್ತು ಸಾಮಾಜಿಕ ಆರೈಕೆ ಕುರಿತು ಸಮರ್ಪಕ ತರಬೇತಿ ಇರಲಿಲ್ಲ.
6. ಸಾಮಾಜಿಕ ಒಳಗೊಳ್ಳುವಿಕೆಯ ಕೊರತೆ: ಅನಾಥ ಮಕ್ಕಳು ಸಮಾಜದ ಮುಖ್ಯಧಾರೆಯ ಚಟುವಟಿಕೆಯಿಂದ ದೂರವಾಗಿರುವುದು ಕಂಡುಬಂದಿದೆ.

**ಪರಿಹಾರಗಳು**

1. ಸರ್ಕಾರದ ನಿಗಾ ಹಾಗೂ ಹಣಕಾಸು ನೆರವು ವೃದ್ಧಿ: ರಾಜ್ಯ ಸರ್ಕಾರವು ಅನಾಥಾಶ್ರಮಗಳಿಗೆ ನಿಯಮಿತ ಹಣಕಾಸು ನೆರವು ನೀಡಬೇಕು ಹಾಗೂ ನಿಯಮಿತ ತಪಾಸಣೆ ನಡೆಸಬೇಕು.
2. ಸಮರ್ಪಕ ಶಿಕ್ಷಣ ಸೌಲಭ್ಯ: ಸರ್ಕಾರದ ಪಾಠಶಾಲೆಗಳೊಂದಿಗೆ ಸಂಯೋಜನೆ ಮಾಡಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು.
3. ಮನೋವೈಜ್ಞಾನಿಕ ಸಲಹಾ ಸೇವೆಗಳು: ಪ್ರತಿ ಆಶ್ರಮದಲ್ಲೂ ತರಬೇತಿಗೊಂಡ ಕೌನ್ಸಿಲರ್‌ಗಳ ಸೇವೆ ಲಭ್ಯವಾಗಬೇಕು.
4. ಸಾಮಾಜಿಕ ಮಿಶ್ರಣ: ಅನಾಥ ಮಕ್ಕಳನ್ನು ಸಾಮಾನ್ಯ ಮಕ್ಕಳ ಚಟುವಟಿಕೆಗಳಲ್ಲಿ ಸೇರಿಸುವ ಮೂಲಕ ಸಾಮಾಜಿಕ ಸಂವೇದನೆ ಹೆಚ್ಚಿಸಬೇಕು.
5. ಸಿಬ್ಬಂದಿ ತರಬೇತಿ ಕಾರ್ಯಕ್ರಮಗಳು: ಆಶ್ರಮ ನಿರ್ವಾಹಕರು ಮತ್ತು ಸಿಬ್ಬಂದಿಗೆ ಮಕ್ಕಳ ಕಲ್ಯಾಣ ಮತ್ತು ಮಕ್ಕಳ ಹಕ್ಕುಗಳ ಕುರಿತ ತರಬೇತಿ ನೀಡಬೇಕು.
6. ಸಂಸ್ಥೆಗಳ ಮಧ್ಯೆ ಸಮನ್ವಯ: ಸರ್ಕಾರ, NGOಗಳು ಮತ್ತು ದಾನಶೀಲ ಸಂಸ್ಥೆಗಳ ನಡುವೆ ಸಹಕಾರದ ವಲಯವನ್ನು ನಿರ್ಮಿಸಬೇಕು.
7. ಮಾಧ್ಯಮದ ಜಾಗೃತಿ: ಸಮಾಜದಲ್ಲಿ ಅನಾಥಾಶ್ರಮಗಳ ಬಗ್ಗೆ ಧನಾತ್ಮಕ ದೃಷ್ಟಿಕೋನ ನಿರ್ಮಿಸಲು ಮಾಧ್ಯಮ ಸಹಕಾರ ನೀಡಬೇಕು.

**ಉಪಸಂಹಾರ**

ಅನಾಥಾಶ್ರಮಗಳು ಸಮಾಜದ ಹೃದಯದ ಧ್ವನಿಯಾಗಿವೆ. ಇವು ಮಾನವೀಯತೆಯ ಪ್ರತೀಕವಾಗಿದ್ದು, ಮಕ್ಕಳು ಜೀವನದ ಹೊಸ ದಿಕ್ಕು ಕಾಣಲು

ನೆರವಾಗುತ್ತವೆ. ಈ ಅಧ್ಯಯನದಿಂದ ಸ್ಪಷ್ಟವಾಗುವಂತೆ, ಅನಾಥಾಶ್ರಮಗಳು ಸಮಾಜದ ಬಡತನದ ಮಕ್ಕಳ ಭವಿಷ್ಯದ ಪ್ರಮುಖ ವೇದಿಕೆಗಳಾಗಿವೆ. ಆದರೆ ಆರ್ಥಿಕ, ಆಡಳಿತಾತ್ಮಕ ಮತ್ತು ಮಾನಸಿಕ ಬೆಂಬಲದ ಕೊರತೆಯಿಂದ ಅನೇಕ ಸವಾಲುಗಳು ಎದುರಾಗುತ್ತಿವೆ. ಸರ್ಕಾರ, ನಾಗರಿಕರು ಹಾಗೂ ಖಾಸಗಿ ಸಂಸ್ಥೆಗಳು ಒಟ್ಟಾಗಿ ಕೈಜೋಡಿಸಿದರೆ, ಈ ಮಕ್ಕಳು ಕೇವಲ "ಅನಾಥರು" ಅಲ್ಲ, "ಭವಿಷ್ಯದ ನಾಗರಿಕರು" ಆಗಬಹುದು. ಅಂತಿಮವಾಗಿ, ಅನಾಥಾಶ್ರಮಗಳ ಬಲವರ್ಧನೆ ಮತ್ತು ಮಕ್ಕಳ ಸಮಗ್ರ ಬೆಳವಣಿಗೆಗೆ ಸಮಾಜದ ಪ್ರತಿಯೊಬ್ಬರ ಸಹಕಾರ ಅಗತ್ಯ.

**ಪರಾಮರ್ಶನ ಗ್ರಂಥಗಳು:**


1. Bell, Thomas (28 September 2011). BBC News – Nepal comes to terms with foreign adoptions tragedy. BBC. Retrieved 17 October 2011.
2. Government of Karnataka, Child Welfare Policy Reports, 2023.
3. UNICEF, State of World's Children Report, 2024.
4. Bose, A. (2022). Sociology of Child Welfare. New Delhi: Rawat Publications.
5. Field data collected from various orphanages in Bangalore, 2024–2025.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.